Series : €ABA€

SET-4

Q.P. Code No. **15**

रोल नं.
Roll No.

Candidates must write the Code on the title page of the answer-book.

- ಈ ಪ್ರಶ್ನೆಪತ್ರಿಕೆಯಲ್ಲಿ **7** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **11** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **7** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **11** questions.
- **Please write down the Serial Number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

*

# ಕನ್ನಡ
# KANNADA

*ಅನುಮತಿಸಲಾದ ಸಮಯ : **2** ಗಂಟೆ* — *ಗರಿಷ್ಠ ಅಂಕಗಳು : **40***

*Time allowed : **2** hours* — *Maximum Marks : **40***

**General Instructions :**

Read the following instructions carefully and follow :

1. This question paper contains A, B, C, D & E five (5) Sections – Unseen Passage, Grammar, Seen Comprehension, Literature, Creative Writing & History of Kannada Literature.
2. Part A (Unseen Passage) contains two (2) questions. Attempt both questions.
3. Part B (Grammar) contains three (3) questions based on specific instructions given in the question itself.
4. Part C (Seen Comprehension) contains two (2) questions. Attempt both questions.
5. Part D (Literature – Prose, Poetry & Deergha Gadya) contains six (6) questions based on specific instructions given to the question itself.
6. Part E (Creative Writing & History of Kannada Literature) contains three (3) questions based on specific instructions given to the question itself.

*

**ಸೂಚನೆಗಳು :**

**ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :**

1. ಪ್ರಶ್ನೆ ಪತ್ರಿಕೆಯು **A, B, C, D** ಮತ್ತು **E** ಎಂಬ **ಐದು (5)** ವಿಭಾಗಗಳನ್ನು ಒಳಗೊಂಡಿದೆ.
2. **ವಿಭಾಗ A,** ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಗದ್ಯಾಂಶ ಕೊಡಲಾಗಿದೆ. ಗದ್ಯಾಂಶದ ಕೆಳಗೆ **ಎರಡು (2)** ಪ್ರಶ್ನೆಗಳನ್ನು ಕೊಡಲಾಗಿದೆ.
3. **ವಿಭಾಗ B,** ಅನ್ವಯಿಕ ವ್ಯಾಕರಣದಲ್ಲಿ ಎರಡು ಅಂಕದ **ಮೂರು (3)** ಪ್ರಶ್ನೆಗಳನ್ನು ಕೊಡಲಾಗಿದೆ.
4. **ವಿಭಾಗ C,** ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಪದ್ಯಾಂಶ ಕೊಡಲಾಗಿದೆ. ಪದ್ಯಾಂಶದ ಕೆಳಗೆ **ಎರಡು (2)** ಪ್ರಶ್ನೆಗಳನ್ನು ಕೊಡಲಾಗಿದೆ.
5. **ವಿಭಾಗ D,** ಪಠ್ಯಗಳ ಅಧ್ಯಯನ (ಗದ್ಯ, ಪದ್ಯ ಮತ್ತು ದೀರ್ಘಗದ್ಯ) ವಿಭಾಗದಲ್ಲಿ ಕೊಟ್ಟಿರುವ **ಆರು (6)** ಪ್ರಶ್ನೆಗಳಿಗೆ ಆಯ್ಕೆ ನೋಡಿ ಉತ್ತರಿಸಬೇಕು.
6. **ವಿಭಾಗ E,** ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ, ಕೃತಿ, ಹಿನ್ನೆಲೆಯಲ್ಲಿ)

| | | |
|---|---|---|
| **ವಿಭಾಗ A** | ವಾಚನ ಮತ್ತು ಗ್ರಹಿಕಾ ಕೌಶಲ್ಯ | **04** ಅಂಕಗಳು |
| **ವಿಭಾಗ B** | ಅನ್ವಯಿಕ ವ್ಯಾಕರಣ | **06** ಅಂಕಗಳು |
| **ವಿಭಾಗ C** | ವಾಚನ ಮತ್ತು ಗ್ರಹಿಕಾ ಕೌಶಲ್ಯ | **04** ಅಂಕಗಳು |
| **ವಿಭಾಗ D** | ಪಠ್ಯಗಳ ಅಧ್ಯಯನ | **16** ಅಂಕಗಳು |
| **ವಿಭಾಗ E** | ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕವಿ ಪರಿಚಯ | **10** ಅಂಕಗಳು |
| | **ಒಟ್ಟು** | **40** ಅಂಕಗಳು |

## ವಿಭಾಗ – A

### ವಾಚನ ಮತ್ತು ಗ್ರಹಿಕಾ ಕೌಶಲ್ಯ : 04 ಅಂಕಗಳು

1. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಪಂಪನ ವಿಕ್ರಮಾರ್ಜುನ ವಿಜಯವು ಮಹಾಭಾರತವನ್ನು ಅನುಸರಿಸಿ ಬರೆದ ಚಂಪೂ ಕೃತಿಯಾಗಿದೆ. ಇದು ಕನ್ನಡದ ವಿಶಿಷ್ಟವಾದ ಗದ್ಯ – ಪದ್ಯ ಮಿಶ್ರಿತ ಚಂಪು ಬಗೆಯದಾಗಿದ್ದು, ಕನ್ನಡದ ಅತ್ಯಂತ ಪ್ರಾಚೀನ ಮಹಾಕಾವ್ಯವೆನಿಸಿದೆ. ಪಂಪನ ಪ್ರಭಾವವು ಕನ್ನಡ ಸಾಹಿತ್ಯದ ಮೇಲೆ ಎಷ್ಟಿದೆಯೆಂದರೆ ತೀ.ನಂ. ಶ್ರೀಕಂಠಯ್ಯನವರು ಹೇಳುವಂತೆ 'ಪಂಪನು ಕನ್ನಡದ ಕಾಳಿದಾಸ' ಎನ್ನುವಂತಾಗಿದೆ. ಜೈನ ಕವಿಯಾದ ಜಿನಸೇನನ 'ಮಹಾಪುರಾಣ' ವನ್ನು ಆಧರಿಸಿ ಬರೆದ ಕೃತಿ ಆದಿಪುರಾಣ.

೧೨ ನೆಯ ಶತಮಾನವು ಕನ್ನಡ ಸಾಹಿತ್ಯದ ವಸ್ತು ಮತ್ತು ಶೈಲಿಯಲ್ಲಿ ಮಹತ್ತರ ಬದಲಾವಣೆ-ಯಾದುದನ್ನು ಕಂಡಿತು. ಮೂಲಭೂತವಾಗಿ ಕ್ರಾಂತಿಕಾರಕ ದೃಷ್ಟಿಯ ವೀರಶೈವ ಪುನರುಜ್ಜೀವನವೇ ಸಾಹಿತ್ಯದಲ್ಲಿಯೂ ಪ್ರತಿಬಿಂಬಿಸಿತು. ಇದು ಅಸ್ಪೃಶ್ಯತೆಯನ್ನು ಮಾನಿಸಲಿಲ್ಲ. ಸ್ತ್ರೀಯರನ್ನು ಸಮಾನ ಗೌರವದಿಂದ ಕಂಡಿತು. ಸಂಸ್ಕೃತದ ಸೆರೆಯಿಂದ ಕನ್ನಡವನ್ನು ಮುಕ್ತ ಮಾಡಿತು. ಬಸವಣ್ಣ ಈ ಚಳುವಳಿಯ ಸಂಚಲನದ ಸೂತ್ರಧಾರ ಮತ್ತು ಪ್ರೇರಕ ಶಕ್ತಿಯೂ ಆಗಿದ್ದ. ಅವನ ವಚನಗಳನ್ನು ಗದ್ಯ – ಪದ್ಯಗಳೆಂದು ಕರೆಯಲಾಗಿದೆ. ಅಸತ್ಯ – ಅಜ್ಞಾನಗಳ ಬಂಧನದಿಂದ ಮನುಷ್ಯನನ್ನು ಬಿಡಿಸುವ ಕಾಳಜಿ ವಚನಗಳಲ್ಲಿತ್ತು. ಇಳೆಯಲ್ಲಿಯೇ ಸುಖ ಹಿತವನ್ನು ಸಾಧಿಸುವ ಮಾರ್ಗವನ್ನು ಇವು ತಿಳಿಸಿದವು. ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ ಮುಂತಾದವರು ಪ್ರಮುಖ ವಚನಕಾರರಾಗಿದ್ದಾರೆ.

ಬಸವಣ್ಣನ ನಂತರ ಕನ್ನಡ ಸಾಹಿತ್ಯದ ಮೇಲೆ ಬಹಳ ಪ್ರಭಾವ ಬೀರಿದವನು ಹರಿಹರ. ಅವನು ಕಾವ್ಯದಲ್ಲಿ 'ರಗಳೆ' ಎಂಬ ಹೊಸ ಛಂದಸ್ಸನ್ನು ರೂಪಿಸಿ ಬರೆದ. ಅವನ 'ಬಸವರಾಜ ದೇವರ ರಗಳೆ' ಮತ್ತು 'ನಂಬಿಯಣ್ಣನ ರಗಳೆ' ಈ ಛಂದಸ್ಸಿನ ಮಾದರಿಗೆ ಉದಾಹರಣೆಗಳಾಗಿವೆ. ಅವನ ಸೋದರಳಿಯ ರಾಘವಾಂಕನು 'ಷಟ್ಪದಿ' ಎಂಬ ಹೊಸ ಛಂದಸ್ಸನ್ನು ಬಳಸಿ ಕಾವ್ಯ ಬರೆದ. 'ಸೋಮನಾಥ ಚರಿತೆ', 'ಸಿದ್ಧರಾಮ ಚರಿತೆ' ಹಾಗೂ 'ಹರಿಶ್ಚಂದ್ರ ಕಾವ್ಯ' ಅವನ ಮೇರು ಕಾವ್ಯ ಕೃತಿಗಳಾಗಿವೆ.

ಪ್ರಶ್ನೆಗಳು.

(i) ಕನ್ನಡ ಸಾಹಿತ್ಯದಲ್ಲಿ ಪಂಪನ ವಿಶೇಷತೆಯನ್ನು ತಿಳಿಸಿ. 2

(ii) ಹರಿಹರ, ರಾಘವಾಂಕರ ವಿಶೇಷತೆಯನ್ನು ಕುರಿತು ಬರೆಯಿರಿ. 2

## ವಿಭಾಗ – B

## ಅನ್ವಯಿಕ ವ್ಯಾಕರಣ : 06 ಅಂಕಗಳು

**2.** ಕೆಳಗಿನ ವಾಕ್ಯಪ್ರಕಾರವನ್ನು ತಿಳಿಸಿ, ಭೂತಕಾಲಕ್ಕೆ ಪರಿವರ್ತಿಸಿ. 2

(i) ಅವರು ಕೆಲಸವನ್ನು ನಿಷ್ಠೆಯಿಂದ ಮಾಡಿದರೇ ?

**3.** ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. 2

(i) ದೇಶ ಸುತ್ತಬೇಕು ; ಕೋಶ ಓದಬೇಕು.

(ii) ಚಿಂತೆಯೇ ಮುಪ್ಪು ; ಸಂತೋಷವೇ ಯೌವ್ವನ.

**4.** ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ, ಛಂದಸ್ಸಿನ ಹೆಸರು ತಿಳಿಸಿ. 2

ಬಸುರ ಬಗೆವೆನು ಕೀಚಕನ ನಸು

ಮಿಸುಕಿದೊಡೆ ವೈರಾಟ ವಂಶದ

ಹೆಸರ ತೊಡೆವೆನು ನಮ್ಮ ನರಿದೊಡೆ ಕೌರವವ್ರಜವ

**ಅಥವಾ**

ರಾಮನಿನಗಲ್ಚಿತಂದಾ

ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ

## ವಿಭಾಗ - C

### ವಾಚನ ಮತ್ತು ಗ್ರಹಿಕಾ ಕೌಶಲ್ಯ : 04 ಅಂಕಗಳು

5. ಕೆಳಗಿನ ಪದ್ಯಭಾಗ ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಶಿಲುಬೆ ಏರಿದ್ದಾನೆ
ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ,
ಕೇಕು, ಚಳಿ, ನಕ್ಷತ್ರ, ದೀಪ,
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ,
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ.

ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ
ಬಾಗಿದ ಶಿರ
ಕುತ್ತಿಗೆಯಲಿ ಉಬ್ಬಿದೊಂದು ನರ,
ಯಾತನೆಗೂ ನಲ್ವಾತನೇ ನುಡಿವ ಮುಖ ಮುದ್ರೆ
ತೆರೆದೆದೆ
ಎನ್ನುವಂತಿದೆ,
ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ,
ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ,
ಮನ್ನಿಸಲಿ ನಿಮ್ಮನ್ನ ಆ ದೇವರೆ !

ನೀವು ಬಡಿದ ಸುತ್ತಿಗೆಗಳು

ಮೊಳೆಗಳು

ಮುಕುಟ ಹೆಣೆದ ಮುಳ್ಳುಗಳು

ಹಬ್ಬಿಸಿದ ಸುಳ್ಳುಗಳು

ರೋಮನರ ಕಿವಿಡೆಬ್ಬಿಸುವ ಕೊಂಬುಗಳು

ಕಾಲ ರಾಯನ ಗುಜರಿ ಸೇರಿಲ್ಲ –

ವೇಷ ಮರೆಸಿವೆ ಅಷ್ಟೆ, ಈ ಎಲ್ಲ ಕೇಡುಗಳು ;

ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡ್‌ಗಳು.

ಅವಕ್ಕೆ ಚಲನೆಯೊದಗಿಸಿವೆ ;

ನಿಮ್ಮವೆ ಬಲಿಷ್ಠ ಕೈಗಳು

ಎದೆಯಾಳದ ಮುಯ್ಯಿಗಳು

**ಪ್ರಶ್ನೆಗಳು.**

(i) ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ ? **2**

(ii) ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಹೇಳುವಂತಿದೆ ? **2**

## ವಿಭಾಗ – D

### ಪಠ್ಯಗಳ ಅಧ್ಯಯನ : (ಗದ್ಯ, ಪದ್ಯ ಮತ್ತು ದೀರ್ಘಗದ್ಯ) 16 ಅಂಕಗಳು

6. ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. **$2 \times 3 = 6$**

(i) ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು ?

(ii) ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ ?

**ಅಥವಾ**

ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು ?

(iii) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ ?

7. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. **3 × 2 = 6**

(i) ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ

**ಅಥವಾ**

ಧಗಧಗ ಉರಿವ ಜ್ವಾಲಾಮುಖಿಯಾಗಿದ್ದೇನೆ

(ii) ಪದ್ಯ ವಧ್ಯಂ, ಗದ್ಯಂ ಹೃದ್ಯಂ

8. **ಹತ್ತು** ವಾಕ್ಯಗಳಲ್ಲಿ ಉತ್ತರಿಸಿ. **4 × 1 = 4**

(i) ಪೋಸ್ಟ್ ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ ?

## ವಿಭಾಗ – E

## ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ

## (ಕವಿ, ಕೃತಿ ಹಿನ್ನೆಲೆಯಲ್ಲಿ) : 10 ಅಂಕಗಳು

9. ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅನುಭವ ಬರೆಯಿರಿ. **4 × 1 = 4**

(i) ಕಳೆದು ಹೋದ ಮಗುವೊಂದು ನಿಮಗೆ ಸಿಕ್ಕಾಗ .. .. ..

(ii) ಸಂತೋಷ ಕೂಟವೊಂದರಲ್ಲಿ ನೀವು ಭಾಗವಹಿಸಿದಾಗ .. .. ..

10. ನಿಮ್ಮ ಊರಿನಲ್ಲಿ ವೈದ್ಯಕೀಯ ವ್ಯವಸ್ಥೆ ಸರಿಯಿಲ್ಲದಿರುವ ಕಾರಣ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. **4 × 1 = 4**

11. ಕವಿ – ಕೃತಿ ಪರಿಚಯ ಬರೆಯಿರಿ. **(ಬೇಕಾದ ಒಬ್ಬರನ್ನು ಕುರಿತು)** **2 × 1 = 2**

(i) ಕುಮಾರವ್ಯಾಸ

(ii) ಕೆ.ಎಸ್. ನಿಸಾರ್ ಅಹಮದ್

*